Web site:www.cescmysore.org CIN:U40109KA2004SGC035177

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೋಂದಾಯಿತ ವಿಳಾಸ: ನಂ29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-570017

☎: 08236 – 255110

Mobile: 9448994894

email : aeeppura@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),

ಸೆಸ್ಕ್, ಕಾ ಮತ್ತು ಪಾ ಉಪ ವಿಭಾಗ, ಪಾಂಡವಪುರ.

ಸಂಖ್ಯೆ:ಸಕಾನಿಇಂ(ವಿ)/ಹಿಸ(ಕಂ):ಸೆಸ್ಕ್:ಪಾಂ.ಪುರ;- 2722-36 ದಿನಾಂಕ: 23-12-19

ದಿನಾಂಕ: 17-12-2019 ರ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಶ್ರೀ ಸೋಮರಾಜು, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಸೆಸ್ಕ್,ಪಾಂಡವಪುರ ವಿಭಾಗ ರವರ ಅಧ್ಯಕ್ಷತೆಯಲ್ಲಿ ಪಾಂಡವಪುರ ಉಪ ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

<u>ಹಾಜರಿದ್ದ ಅಧಿಕಾರಿಗಳು / ನೌಕರರು</u>

<u>ಶ್ರೀಮತಿ/ಶ್ರೀಯುತ :</u>

| | | |
|---|---|---|
| 1. | ಸೋಮರಾಜು | : ಕಾನಿಇಂ(ವಿ), ಪಾಂಡವಪುರ ವಿಭಾಗ. |
| 2. | ಎಂ.ಪ್ರಕಾಶ್ | : ಲೆಕ್ಕಾಧಿಕಾರಿ. ಪಾಂಡವಪುರ ವಿಭಾಗ. |
| 3. | ವಿ. ಪುಟ್ಟಸ್ವಾಮಿ | : ಸಕಾನಿಇಂ(ವಿ), ಪಾಂಡವಪುರ ಉಪವಿಭಾಗ. |
| 4. | ರೂಪಿಣಿ.ಎಂ.ಎನ್ | : ಸಇಂ(ತಾಂ), ಪಾಂಡವಪುರ ಉಪವಿಭಾಗ. |
| 5 | ವಿ.ಕೃಷ್ಣ ಮೂರ್ತಿ | : ಪ್ರ.ಸಇಂ(ವಿ), ಟಿ.ಎಸ್. ಛತ್ರ ಶಾಖೆ. |
| 6. | ಪಾಂಡುರಂಗ.ಹೆಚ್.ಸಿ | : ಸಇಂ(ವಿ), ಪಟ್ಟಣ ಶಾಖೆ. |
| 7. | ಸತೀಶ್ | : ಸಇಂ(ವಿ), ಮೇಲುಕೋಟೆ ಶಾಖೆ. |
| 8. | ಜಿ.ಸುಷ್ಮ | : ಕಿಇಂ(ವಿ), ಚಿನಕುರಳಿ ಶಾಖೆ. |
| 10. | ಎ.ಬಿ.ಕಿರಣ್‌ಕುಮಾರ್ | : ಕಿಇಂ(ವಿ), ಕ್ಯಾತನಹಳ್ಳಿ ಶಾಖೆ. |
| 11. | ಬಿ. ನಂದೀಶ್ | : ಕಿಇಂ(ವಿ), ಬನ್ನಂಗಾಡಿ ಶಾಖೆ. |
| 12. | ಎಂ.ಬಿ ಚೆಲುವರಾಜು | : ಕಿಇಂ(ವಿ), ಮಾಣಿಕ್ಯನಹಳ್ಳಿ ಶಾಖೆ. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು, ಜೊತೆಗೆ ಹಿಂದಿನ ಜನ ಸಂಪರ್ಕ ಸಭೆಯಲ್ಲಿ ಬಂದ ದೂರುಗಳು ಅವುಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ಸಭೆಯಲ್ಲಿ ಓದಲಾಯಿತು. ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರು ಮೌಖಿಕವಾಗಿ ಮತ್ತು ಲಿಖಿತವಾಗಿ ತಿಳಿಸಿದ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ/ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತದೆ.

**<u>1. ಶ್ರೀ ಬಸವೇಗೌಡ, ಹಿರೇಮರಳಿ ಗ್ರಾಮ :</u>**

<u>ದೂರು:</u> ನನ್ನ ಜಮೀನಿನಲ್ಲಿ ಬೆಳೆದಿದ್ದ ಕಬ್ಬು ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಸುಟ್ಟು ಹೋಗಿರುತ್ತದೆ. ಆದಷ್ಟೂ ಬೇಗನೆ ಪರಿಹಾರ ಕೊಡಿಸಿರೆಂದು ಮನವಿ ಮಾಡಿದ್ದರು.

<u>ಕ್ರಮ:</u> ಸಭೆಯಲ್ಲಿದ್ದ ಕಾ.ನಿ.ಇಂ.(ವಿ),ರವರು ಪರಿಹಾರದ ಸಂಬಂಧವಾಗಿ ಎಲ್ಲಾ ದಾಖಲಾತಿಗಳನ್ನು ಮೇಲಾಧಿಕಾರಿಗಳಿಗೆ ಕಳುಹಿಸಲಾಗಿದ್ದು ಅವರಿಂದ ಆದೇಶ ಬಂದ ಕೂಡಲೇ ಪರಿಹಾರದ ಬಾಬ್ತುವನ್ನು ವಿತರಿಸಲಾಗುವುದೆಂದು ತಿಳಿಸಿದರು.

**2.ಶ್ರೀ ರೇವಣ್ಣ ದೊಡ್ಡಬ್ಯಾಡರಹಳ್ಳಿ ಗ್ರಾಮ, ಮೊ ನಂ. 9900667972 :**

**ದೂರು:** ನನ್ನ ಜಮೀನಿನ ಮಧ್ಯೆ ಹಾದುಹೋಗಿರುವ ವಿದ್ಯುತ್ ಕಂಬ ಮತ್ತು ಟಿ.ಸಿ.ಯನ್ನು ಬೇರೇಡೆಗೆ ಬದಲಾಯಿಸಿಕೊಡುವಂತೆಯೂ ಮತ್ತು ತಿಮ್ಮನಕೊಪ್ಪಲಿನ ವಿ.ಸಿ. ನಾಲೆಯ ಶಂಕರ್ ರವರ ಜಮೀನಿನ ಹತ್ತಿರ ಜೋತು ಬಿದ್ದಿರುವ ವಿದ್ಯುತ್ ಮಾರ್ಗವನ್ನು ಸರಿಪಡಿಸಿಕೊಡುವಂತೆ ಮನವಿ ಮಾಡಿದ್ದರು.
**ಕ್ರಮ:** ಸಭೆಯಲ್ಲಿದ್ದ ಕಾ.ನಿ.ಇಂ.(ವಿ),ರವರು ವಿದ್ಯುತ್ ಮಾರ್ಗದ ಬದಲಾವಣೆಗೆ ತಾವು ಶುಲ್ಕವನ್ನು ಭರಿಸಿ ಸ್ವಂತ ಖರ್ಚಿನಲ್ಲಿ ಕಾಮಗಾರಿಯನ್ನು ನಿರ್ವಹಿಸಿಕೊಳ್ಳಬೇಕು ಮತ್ತು ತಿಮ್ಮನಕೊಪ್ಪಲು ಹತ್ತಿರವಿರುವ ಜೋತು ಬಿದ್ದಿರುವ ವಿದ್ಯುತ್ ಮಾರ್ಗಕ್ಕೆ ಮಧ್ಯಂತರ ಕಂಬವನ್ನು ಹಾಕಿಕೊಡಲಾಗುವುದೆಂದು ತಿಳಿಸಿದರು.

**3. ಶ್ರೀ ಎಲ್. ಎಸ್. ರಾಜು, ಲಕ್ಷ್ಮಸಾಗರ ಗ್ರಾಮ , ಮೊಬೈಲ್ ನಂ.94812100024 :**

**ದೂರು:** ಪ್ರತಿದಿನ ನಮ್ಮ ಊರಿನಲ್ಲಿ ಸಿಂಗಲ್ ಪೇಸ್ ಆಗುತ್ತಿರುತ್ತದೆ ಮತ್ತು ಆಗ್ಗಾಗೇ ಲೈನ್ ಟ್ರಿಪ್ ಆಗುತ್ತಿರುತ್ತದೆ. ಅದಕ್ಕಾಗಿ ಬೇರೆ ಒಂದು ಟಿ.ಸಿ. ಯನ್ನು ಅಳವಡಿಸಿ ಮತ್ತು ತೋಟದ ಮಧ್ಯೆ ಹಾದುಹೋಗಿರುವ ವಿದ್ಯುತ್ ಮಾರ್ಗವನ್ನು ರಸ್ತೆಯೆಡೆಗೆ ಬದಲಾಯಿಸಿ ಕೊಡುವಂತೆ ಕೋರಿದರು.

**ಕ್ರಮ:** ಸಭೆಯಲ್ಲಿದ್ದ ಕಾ.ನಿ.ಇಂ.(ವಿ),ರವರು ಊರಿಗೆ ಹೆಚ್ಚುವರಿಯಾಗಿ ಪರಿವರ್ತಕವನ್ನು ಅಳವಡಿಸಲು ಅಂದಾಜು ಪಟ್ಟಿ ಸಲ್ಲಿಸುವಂತೆ ಸಂಬಂಧಪಟ್ಟ ಶಾಖಾಧಿಕಾರಿಗೂ ಮತ್ತು ಗ್ರಾಹಕರಿಗೆ ವಿದ್ಯುತ್ ಮಾರ್ಗವನ್ನು ಬದಲಾವಣೆ ಮಾಡಲು ತಾವು ಸ್ವಂತ ಖರ್ಚಿನಲ್ಲಿ ಕಾಮಗಾರಿಯನ್ನು ನಿರ್ವಹಿಸಿಕೊಳ್ಳಬೇಕೆಂದು ತಿಳಿಸಿದರು .

**4. ಶ್ರೀ ಜಿ.ಬಿ. ಶಿವರಾಮು, ಚಿಕ್ಕಕೊಪ್ಪಲು ಗ್ರಾಮ, ಮೊಬೈಲ್ ನಂ. 9449786798 :**

**ದೂರು:** ನನ್ನ ಎರಡು ಐ.ಪಿ. ಸ್ಥಾವರಗಳಿಗೆ ಹಣ ಪಾವತಿಸಿ ಟಿ.ಸಿ. ಅಳವಡಿಸುವ ಕೆಲಸವು ಪ್ರಗತಿಯಲ್ಲಿದ್ದು, ಕಂಬಗಳನ್ನು ಮಾತ್ರ ಅಳವಡಿಸಿದ್ದು ,ಇನ್ನೂ ವೈರನ್ನು ಎಳೆದು ಟಿ.ಸಿ.ಯನ್ನು ಹಾಕಬೇಕಾಗಿರುತ್ತದೆ. ಆದಷ್ಟೂ ಬೇಗ ಕೆಲಸವ ನಿರ್ವಹಿಸಿ ಕೊಡಬೇಕಾಗಿ ಕೋರಿದರು. ಅಲ್ಲದೇ. ನನ್ನ ತೋಟದ ಮನೆಗೆ ಗೃಹ ಬಳಕೆಗಾಗಿ ನಿರಂತರ ಜ್ಯೋತಿ ಯೋಜನೆ ಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಿ ಕೊಡಬೇಕಾಗಿ ಕೋರಿರುತ್ತಾರೆ.

**ಕ್ರಮ:** ಸಭೆಯಲ್ಲಿದ್ದ ಕಾ.ನಿ.ಇಂ.(ವಿ),ರವರು ಸಂಬಂಧಪಟ್ಟ ಶಾಖಾಧಿಕಾರಿ ಮತ್ತು ಗುತ್ತಿಗೆದಾರರಿಗೆ ಸೂಚಿಸಿ ಉಳಿದ ಕಾಮಗಾರಿ ಕೆಲಸವನ್ನು ಬೇಗನೆ ಪೂರೈಸುವಂತೆ ತಿಳಿಸಿದರು ಜೊತೆಗೆ ತೋಟದ ಮನೆಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಸಿಕೊಡಲು ಸ್ವಂತ ಖರ್ಚಿನಲ್ಲಿ ನಿರ್ವಹಣೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

5. **ಶ್ರೀ ಡಾ॥ ಸಿದ್ದೇಗೌಡ ಅರಳಕುಪ್ಪೆ ಗ್ರಾಮ, ಮೊಬೈಲ್ ನಂಬರ್ 996432060 :**
ದೂರು:- ನಮ್ಮ ಐ.ಪಿ ಸೆಟ್‌ಗೆ ಅಳವಡಿಸಿರುವ ವಿದ್ಯುತ್ ಮಾರ್ಗದಲ್ಲಿನ 2ಕಂಬಗಳು ಶಿಥಿಲವಾಗಿದ್ದು ಅವುಗಳನ್ನು ಬದಲಾಯಿಸಿ ಕೊಡುವಂತೆ ಮನವಿ ಮಾಡಿದರು.

ಕ್ರಮ:- ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟ ಶಾಖಾಧಿಕಾರಿಗೆ ಅಂದಾಜು ಪಟ್ಟಿ ಸಲ್ಲಿಸಲು ಸೂಚಿಸಿ ಆದಷ್ಟೂ ಬೇಗನೆ ಕೆಲಸ ನಿರ್ವಹಿಸಿ ಕೊಡುವುದಾಗಿ ಗ್ರಾಹಕರಿಗೆ ತಿಳಿಸಿದರು.

6. **ಶ್ರೀ ಸುರೇಶ್ ಕನೋಗನಹಳ್ಳಿ ಗ್ರಾಮ ಮೊಬೈಲ್ ನಂಬರ್: 9945861299 :**
**ದೂರು**: ನಮ್ಮ ಜಮೀನಿನ ಮೇಲೆ ಹಾದು ಹೋಗಿರುವ ಕಂಬಗಳನ್ನು ಪಕ್ಕಕ್ಕೆ ಬದಲಾಯಿಸಲು ಕೋರಿದರು.

ಕ್ರಮ: ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಬದಲಾವಣೆಗೆ ಶುಲ್ಕ ಪಾವತಿಸಿ, ಸ್ವಯಂ ನಿರ್ವಹಣ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಪೂರೈಸಿಕೊಳ್ಳಬಹುದೆಂದು ತಿಳಿಸಿದ್ದರು.

7. **ಶ್ರೀ ಪುಟ್ಟಸ್ವಾಮಿ, ನಲ್ಲಹಳ್ಳಿ ಗ್ರಾಮ, ಮೊಬೈಲ್ ನಂ. 9611440715 :**
ದೂರು: ನಾನು 2 ಐ.ಪಿ ಸೆಟ್‌ಗಳಿಗೆ ಹಣ ಪಾವತಿಸಿದ್ದು, ಟಿ.ಸಿ ಅಳವಡಿಸಿ ಕೊಡಲು ಕೋರಿದ್ದು ಅದರಂತೆ ಕಂಬಗಳನ್ನು ಮಾತ್ರ ಹಾಕಿರುತ್ತೀರಿ, ಆದಷ್ಟೂ ಬೇಗನೆ ಟಿ.ಸಿ. ಹಾಕಿ ಕೊಡಬೇಕಾಗಿ ಕೋರಿದ್ದರು.
ಕ್ರಮ: ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿ ಮತ್ತು ಗುತ್ತಿಗೆದಾರರಿಗೆ ಆದಷ್ಟೂ ಬೇಗನೆ ಕೆಲಸ ಪೂರೈಸುವಂತೆ ಸೂಚಿಸಿದ್ದರು.

8. **ಶ್ರೀ ವರದರಾಜು, ಚಿನಕುರಳಿ ಗ್ರಾಮ, ಮೊಬೈಲ್ ನಂ. 9845769375 :**
ದೂರು: ನನ್ನ ಜಮೀನು ಚಿಕ್ಕಬೋಗನಹಳ್ಳಿ ಎಲ್ಲೆಯಲ್ಲಿದ್ದು, ವೈರ್‌ಗಳು ಜೋತಾಡುತ್ತಿರುತ್ತವೆ ಇದನ್ನು ಸರಿಪಡಿಸಿ ಕೊಡಬೇಕಾಗಿ ಕೋರಿರುತ್ತಾರೆ.
ಕ್ರಮ:– ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಂಬಂದಪಟ್ಟ ಶಾಖಾಧಿಕಾರಿಗೆ ಎಲ್.ಟಿ.ಸ್ಪೆಸರ್ಸ್‌ಗಳನ್ನು ಉಗ್ರಾಣದಿಂದ ಪಡೆದು ಹಾಕಲು ತಿಳಿಸಿದ್ದರು.

9. **ಶ್ರೀಮತಿ ವಸಂತ ವೈ.ಕೆ. ಕೆನ್ನಾಳು ಗ್ರಾಮ, ಮೊಬೈಲ್ ನಂ. 7411957854 :**
ದೂರು: ನಮ್ಮ ಮನೆಗ ಎಳೆದಿರುವ ಸರ್ವಿಸ್ ಮೈನ್ ವೈರ್‌ಗೆ ಮರದ ರೆಂಬೆಗಳು ತಾಕಿ ಆಗ್ಗಿದಾಂಗೆ ಸಿಂಗಲ್ ಪೇಸ್ ಆಗುತ್ತಿರುತ್ತದೆ ಅದನ್ನು ಸರಿಪಡಿಸಿ ಕೋಡಲು ಕೋರಿರುತ್ತಾರೆ.
ಕ್ರಮ: ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಂಬಂದಪಟ್ಟ ಶಾಖಾಧಿಕಾರಿಗೆ ಜಂಗಲ್ ಕಟಿಂಗ್ ಮಾಡಿಸಲು ಸೂಚಿಸಿದ್ದರು.

10. ಶ್ರೀಮತಿ ಡಿ.ಎಸ್ ಪುಷ್ಪ , ಚಿಕ್ಕಾಡೆ ಗ್ರಾಮ, ಮೊಬೈಲ್ ನಂ. 9980153935 :
ದೂರು: ಆರ್. ಓ ಪ್ಲಾಂಟ್‌ಗೆ ಸರ್ವಿಸ್ ಕೊಡುವುದರ ಜೊತೆಗೆ ಊರಿನಲ್ಲಿರುವ ಶಿಥಿಲವಾಗಿರುವ 3ಕಂಬಗಳನ್ನು ಬದಲಾಯಿಸಲು ಕೋರಿದರು.
ಕ್ರಮ: ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಡಿ.ಡಿ.ಯು.ಜಿ.ಜೆ.ವೈ ಯೋಜನೆಯಡಿಯಲ್ಲಿ ಕಾಮಗಾರಿ ನಿರ್ವಹಿಸಲಾಗಿದ್ದು ಆದಷ್ಟೂ ಬೇಗನೆ ಏಜೆನ್ಸಿಯವರಿಗೆ ತಿಳಿಸಿ, ಹೊಸದಾಗಿ ಎಳೆದಿರುವ ವಿದ್ಯುತ್ ಮಾರ್ಗವನ್ನು ಚಾಲನೆ ಗೊಳಿಸಲಾಗುವುದು ಮತ್ತು ಶಾಖಾಧಿಕಾರಿಯವರಿಂದ ಶಿಥಿಲವಾಗಿರುವ ಕಂಬಗಳಿಗೆ ಅಂದಾಜು ಪಟ್ಟಿ ತರಿಸಿಕೊಂಡು ಬದಲಾಯಿಸಲಾಗುವುದೆಂದು ತಿಳಿಸಿದರು.

11. ಶ್ರೀ ಅಣ್ಣೇಗೌಡ್ರು ಕೆಂಚನಹಳ್ಳಿ ಗ್ರಾಮ:
ದೂರು: ನಮ್ಮ ವ್ಯಾಪ್ತಿಗೆ ಬರುವ ಟಿ.ಎಸ್ ಛತ್ರ ಎನ್.ಜೆ.ವೈ ಫೀಡರ್ ಆಗ್ಗಿಂದಾಗ ಲೈನ್ ಟ್ರಬಲ್ ಆಗುತ್ತಿದ್ದು, ನಮ್ಮ ಊರಿನ ವ್ಯಾಪ್ತಿಯಲ್ಲಿ 2 ಜಿ.ಓ.ಎಸ್.ಗಳನ್ನು ಅಳವಡಿಸಿದ್ದಲ್ಲಿ, ಜಿ.ಓ.ಎಸ್. ಆಪರೇಟ್ ಮಾಡಿ ನಮ್ಮ ಊರಿಗೆ ವಿದ್ಯುತ್ ಸರಬರಾಜು ಮಾಡಿ, ಮುಂದೆ ತೊಂದರೆಯಾದಲ್ಲಿ ನಂತರ ಸರಿಪಡಿಸಬಹುದೆಂದು ಮನವಿ ಮಾಡಿದರು.
ಕ್ರಮ: ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟ ಶಾಖಾಧಿಕಾರಿಯವರಿಗೆ ಸೂಕ್ತ ಕ್ರಮ ವಹಿಸುವಂತೆಯೂ ಮತ್ತು ಕೊಡಹಳ್ಳಿ ಹೊಸೂರು ಹತ್ತಿರ ನಿರ್ಮಿಸಲು ಉದ್ದೇಶಿಸಿರುವ ಎಂ.ಯು.ಎಸ್.ಎಸ್. ಆದಕೂಡಲೆ ನಿಮಗೆ ಅಡಚಣೆ ರಹಿತ ವಿದ್ಯುತ್ ಪೂರೈಸಲಾಗುದೆಂದು ತಿಳಿಸಿದರು.

**:: ಸಭೆಯನ್ನು ಮಧ್ಯಾಹ್ನ 12-50 ಗಂಟೆಗೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು ::**

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಪಾ.ಪುರ/ ದಿನಾಂಕ:

**ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:**

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:**

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:**

1. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.
2. ಸಃಇಂ(ತಾಂ) / ಮುಕ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.